ಓ:ಎಸ್:ನಂ. *288/2017*

ಡಿ .ಡಬ್ಲ್ಯೂ- *1*

ದಿಃ *21-07-2022* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎನ್ ಕೆ ವಕೀಲರಿಂದ

ನಾನು *10*ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಎಸ್.ಕೆ. ಇಬ್ರಾಹಿಂ ಮತ್ತು ಜೈನಾಬೀಯವರು ಎಷ್ಟು ವರ್ಷಗಳಿಂದ ಮಾಳೀಕೊಪ್ಪದಲ್ಲಿ ವಾಸವಾಗಿದ್ದಾರೆಂದರೆ *1979* ರಿಂದ ವಾಸವಾಗಿದ್ದಾರೆಂದು ಸಾಕ್ಷಿ ಸಾಕ್ಷ್ಯ ನುಡಿಯುತ್ತಾರೆ. ನನಗೆ ಈಗ *38* ವರ್ಷ ವಯಸ್ಸಾಗಿದೆ. ದಾವ ಸ್ವತ್ತಿನ ವಿಸ್ತೀರ್ಣ *60* ಇಂಟು *40* ಕ್ರಮ ಸಂಖ್ಯೆ *177* ಎಂದರೆ ಸರಿ. ದಾವ ಸ್ವತ್ತು ವಾದಿಯ ತಂದೆಗೆ ಪಂಚಾಯಿತಿಯಿಂದ ಮಂಜೂರಾಗಿದೆ ಎಂದರೆ ಸರಿಯಲ್ಲ. ಎಸ್.ಕೆ. ಇಬ್ರಾಹಿಂರವರ ಮರಣದ ತನಕ ದಾವ ಆಸ್ತಿಯ ಖಾತೆಯು ಎಸ್.ಕೆ ಇಬ್ರಾಹಿಂರವರ ಹೆಸರಿನಲ್ಲಿತ್ತು ಎಂದರೆ ಸರಿ. ಆತನ ಮರಣ ನಂತರ ದಾವ ಸ್ವತ್ತಿನ ಖಾತೆ ಜೈನಾಬೀಯವರ ಹೆಸರಿನಲ್ಲಿ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನನಗೆ ತಿಳಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಜೈನಾಬೀ ನನಗೆ ತಾಯಿಯಾಗಬೇಕು ಎಂದರೆ ಸರಿ. ನನ್ನ ತಾಯಿಯು ದಿಃ *02-02-2015* ರಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ. ವಾದಿಯು ಎಸ್ ಕೆ ಇಬ್ರಾಹಿಂ ಮತ್ತು ಜೈನಾಬೀಯವರ ಜೊತೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನಿಡಿ-*1* ದಾಖಲಾತಿ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ವಾದಿಗೆ ಸೇರಿದ್ದು ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಡಿ-*1* ರಲ್ಲಿ ನಮೂದಾಗಿರುವ ಮಹಮ್ಮದ್ ಕುನ್ನಿ ಯಾರು ಎಂದರೆ ಈ ದಾವೆಯ ವಾದಿ ಎಂದು ಸಾಕ್ಷಿ ಸಾಕ್ಷ್ಯ ನುಡಿಯುತ್ತಾರೆ. ನಿಡಿ-*1*ರ ದಾಖಲಾತಿಗೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಯು ನನ್ನ ಮದುವೆಯ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸಿರುತ್ತಾರೆಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗಳು ಮರಣ ಹೊಂದಿದ ನಂತರ ವಾದಿಯು ದಾವ ಸ್ವತ್ತಿನ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ವಾದಿಯು ದಾವ ಸ್ವತ್ತಿನ ಸ್ವಾಧೀನಾನುಭದಲ್ಲಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಾಯಿಗೆ ಎಸ್.ಕೆ. ಇಬ್ರಾಹಿಂ ಒಬ್ಬನೇ ಗಂಡ ಎಂದರೆ ಸರಿಯಲ್ಲ. ನಮ್ಮ ತಾಯಿಯ ಮೊದಲನೇ ಗಂಡ ಅಬ್ದುಲ್ ರಹೀಂ ಎಂಬುದಾಗಿ ನಮ್ಮ ತಾಯಿ ನಮಗೆ ಹೇಳುತ್ತಿದ್ದರು. ಕುನ್ನಾ ಅಬ್ದುಲ್ ರವರು ಕೇರಳದಲ್ಲಿ ಜನಿಸಿರುತ್ತಾರೆ. ಕುನ್ನಾ ಅಬ್ದುಲ್ ರವರು ಕೇರಳದಲ್ಲಿ ವ್ಯಾಸಂಗ ಮಾಡಿರುತ್ತಾರೆ. ಕುನ್ನಾ ಅಬ್ದುಲ್ ರವರ ತಾಯಿಯ ಹೆಸರು ಕುನ್ನಾ ಅಮೀನಾ. ಎಸ್.ಕೆ.ಇಬ್ರಾಹಿಂ

ಮತ್ತು ಕುನ್ನಾಮೀನಾ ಮದುವೆಯಾದ ಬಗ್ಗೆ ನನ್ನ ಬಳಿ ದಾಖಲೆ ಇರಬಹುದು. ಸದರಿಯವರು ಮಾಳೀಕೊಪ್ಪದಲ್ಲಿ ವಾಸವಾಗಿದ್ದರು.

ಸದರಿ ವಿಚಾರದ ಬಗ್ಗೆ ನನ್ನ ಬಳಿ ದಾಖಲೆ ಇದೆ. ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಅಸಲು ದಾವ ಸಂಖ್ಯೆ *34/2017* ರ ದಾವೆಯನ್ನು ನಾನೇ ಹೂಡಿರುತ್ತೇನೆ. ಕುನ್ನಾ ಅಬ್ದುಲ್ ರವರಿಗೆ ನ್ಯಾಯಾಲಯದಿಂದ ನೋಟೀಸ್ ಜಾರಿಯಾಗದೇ ಇದ್ದರೂ ಸಹ ನಾನು ಕುನ್ನಾ ಅಬ್ದುಲ್ ರವರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ನನಗೆ ದುಡ್ಡಿನ ಅವಶ್ಯಕತೆ ಇದ್ದ ಕಾರಣ ನಾನು ಕುನ್ನಾ ಅಬ್ದುಲ್ ರವರ ಕಡೆಯಿಂದ ಎರಡು ಲಕ್ಷ ಹಣವನ್ನು ಪಡೆದುಕೊಂಡು ನಾನು ಆ ದಾವೆಯನ್ನು ರಾಜಿ ಮಾಡಿಕೊಂಡಿರುತ್ತೇನೆ. ದಾವ ಆಸ್ತಿಗೂ ಮತ್ತು ಕುನ್ನಾ ಅಬ್ದುಲ್ ರವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲದಿದ್ದರೂ ಸಹ ನಾನು ಅತನನ್ನು ಅಸಲು ದಾವ ಸಂಖ್ಯೆ *34/2017* ರಲ್ಲಿ ಪಕ್ಷಗಾರರನ್ನಾಗಿ ಮಾಡಿ ವಾದಿಗೆ ಸೇರಿದ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ  ರಾಜಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ.  ಅಸಲು ಸಂಖ್ಯೆ *34/2017* ರಲ್ಲಿ ವಾದ ಶೀರ್ಷಿಕೆಯಲ್ಲಿ ಅಬ್ದುಲ್ ಕುನ್ನಾರವರು ವಾಸವಾಗಿದ್ದಾರೆಂದರೆ ಸರಿಯಲ್ಲ.  ಅಸಲು ದಾವ ಸಂಖ್ಯೆ *34/2017* ರ ದಾವ ಸ್ವತ್ತಿನಲ್ಲಿ ಎಸ್ ಕೆ ಮಹಮ್ಮದ್ ರವರು ಸ್ವಾಧೀನಾನುಭವದಲ್ಲಿದ್ದರೂ ಸಹ ಆತನನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಎಸ್.ಕೆ. ಮಹಮ್ಮದ್ ರವರು ಸ್ವಾಧೀನಾನುಭವದಲ್ಲಿರುವ ಸ್ವತ್ತಿಗೆ ನಾನು ಮತ್ತು ಕುನ್ನಾ ಅಬ್ದುಲ್ ರವರು ಸೇರಿ ಅತೀಕ್ರಮಣ ಪ್ರವೇಶ ಮಾಡಲು ಪ್ರಯತ್ನ ಪಟ್ಟಾಗ ಎಸ್ ಕೆ ಮಹಮ್ಮದ್ ರವರು ಅಸಲು ದಾವ ಸಂಖ್ಯೆ *34/2017* ರ ಮೇಲ್ಮನವಿಯನ್ನು  ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಕುನ್ನಾ ಅಬ್ದುಲ್ ರವರು ಎಸ್. ಕೆ. ಇಬ್ರಾಹಿಂರವರ ಮಗ ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲದಿದ್ದರೂ ಸಹ ನಾವು ಅಸಲು ದಾವ ಸಂಖ್ಯೆ *34/2017* ನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯದಲ್ಲಿ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ವಾದಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***